**ಕರ್ನಾಟಕ ಸರ್ಕಾರ**
**ಆಯುಷ್ ಇಲಾಖೆ**
ಧನ್ವಂತರಿ ರಸ್ತೆ, ಆನಂದರಾವ್ ವೃತ್ತದ ಹತ್ತಿರ, ಬೆಂಗಳೂರು-560 009
ಇ-ಮೇಲ್ : directorayush@gmail.com
ದೂರವಾಣಿ ಸಂ:080-22876553, ಫ್ಯಾಕ್ಸ್ : 080-22340139

ಸಂಖ್ಯೆ: ಆಯುಷ್/37/ವೈ.ಶಿ(2)/2018-19 ದಿನಾಂಕ: 13-08-2018

**ಗೆ,**

ನಿರ್ದೇಶಕರು,
ವಾರ್ತಾ ಮತ್ತು ಪ್ರಚಾರ ಇಲಾಖೆ,
ಇನ್‌ಫ್ಯಾಂಟ್ರಿ ರಸ್ತೆ,
ಬೆಂಗಳೂರು.

ಮಾನ್ಯರೆ,

ವಿಷಯ:- 2018-19ನೇ ಶೈಕ್ಷಣಿಕ ಸಾಲಿನಲ್ಲಿ ಪಾರಂಪರಿಕ ವೈದ್ಯರ ಮಕ್ಕಳಿಗೆ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಸೀಟುಗಳನ್ನು ಮೀಸಲಿರಿಸಿರುವ ಬಗ್ಗೆ.

ಉಲ್ಲೇಖ:- ಸರ್ಕಾರದ ಆದೇಶ ಸಂಖ್ಯೆ: ಆಕುಕ 257 ಪಿಟಿಡಿ 2016 ದಿನಾಂಕ: 05-04-2017.

********

ಈ ಪತ್ರದೊಂದಿಗೆ ಪತ್ರಿಕಾ ಪ್ರಕಟಣೆಗೆ ಸಂಬಂಧಿಸಿದಂತೆ ಕನ್ನಡ ಭಾಷೆಯ ಸುದ್ದಿಯ ಪ್ರತಿಗಳನ್ನು ಲಗತ್ತಿಸಿ ಕಳುಹಿಸುತ್ತಾ, 2018-19ನೇ ಸಾಲಿನಲ್ಲಿ ಆಯುರ್ವೇದ ಮಹಾವಿದ್ಯಾಲಯಗಳಲ್ಲಿ ಪಾರಂಪರಿಕ ವೈದ್ಯರ ಮಕ್ಕಳಿಗೆ ಉಲ್ಲೇಖಿತ (1)ರ ಸರ್ಕಾರದ ಆದೇಶದಲ್ಲಿ ಮೀಸಲಿರಿಸಿರುವ ಸೀಟುಗಳನ್ನು ಪಡೆಯುವ ಸಂಬಂಧ ಆಸಕ್ತಿಯುಳ್ಳ ವಿದ್ಯಾರ್ಥಿಗಳು ಅರ್ಜಿಗಳನ್ನು ಸಲ್ಲಿಸುವ ಬಗ್ಗೆ ಸಾರ್ವಜನಿಕರ ತಿಳುವಳಿಕೆಗಾಗಿ ಹಾಗೂ ಗಮನ ಸೆಳೆಯಲು ರಾಜ್ಯದ ಪ್ರಚಲಿತ ಎರಡು ಕನ್ನಡ ದಿನಪತ್ರಿಕೆಗಳಲ್ಲಿ ಈ ಕೂಡಲೇ ಪ್ರಕಟಿಸುವಂತೆ ಕೋರಿದೆ.

ತಮ್ಮ ವಿಶ್ವಾಸಿ,

ಜಂಟಿ ನಿರ್ದೇಶಕರು (ಆಯುಷ್)
(ವೈದ್ಯಕೀಯ ಶಿಕ್ಷಣ)
ಆಯುಷ್ ನಿರ್ದೇಶನಾಲಯ,
ಧನ್ವಂತರಿ ರಸ್ತೆ, ಬೆಂಗಳೂರು-09

**ಪ್ರತಿಯನ್ನು:-**
ಪ್ರೊಪ್ರೈಟರ್, ಯಕ್ಷಿ ಕಮ್ಯೂನಿಕೇಷನ್, ಬೆಂಗಳೂರು.

Scanned by CamScanner

ಕರ್ನಾಟಕ ಸರ್ಕಾರ
ಆಯುಷ್ ಇಲಾಖೆ
ಧನ್ವಂತರಿ ರಸ್ತೆ, ಆನಂದರಾವ್ ವೃತ್ತದ ಹತ್ತಿರ, ಬೆಂಗಳೂರು-560 009
ಇ-ಮೇಲ್ : directorayush@gmail.com
ದೂರವಾಣಿ ಸಂ:080-22876553, ಫ್ಯಾಕ್ಸ್ : 080-22340139

ಸಂಖ್ಯೆ: ಆಯುಷ್/37/ವೈ.ಶಿ(2)/2018-19 ದಿನಾಂಕ: 13-08-2018

## ಪತ್ರಿಕಾ ಪ್ರಕಟಣೆ

ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡಲು ಪಾರಂಪರಿಕ ವೈದ್ಯರ ಮಕ್ಕಳಿಗೆ ವಿಶೇಷ ಪ್ರಕರಣದಡಿ ಪ್ರವೇಶಾತಿ ಪರಿಗಣಿಸಿ 2017-18ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬರುವಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮುಖಾಂತರ ಹಂಚಲ್ಪಡುವ ಸರ್ಕಾರಿ ಕೋಟಾ ಸೀಟುಗಳಲ್ಲಿ ಎರಡು ಸೀಟುಗಳನ್ನು ಮೀಸಲಿರಿಸಿದೆ.

ತಾರನಾಥ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಬಳ್ಳಾರಿ ಹಾಗೂ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಮೈಸೂರು ಇಲ್ಲಿ ತಲಾ ಒಂದು ಸೀಟನ್ನು ಕಾಯ್ದಿರಿಸಲಾಗಿದೆ.

ಭಾರತ ಸರ್ಕಾರದ, ಆಯುಷ್ ಮಂತ್ರಾಲಯ, ನವದೆಹಲಿ, ಇವರ ಸೂಚನೆಯಂತೆ 2018-19ನೇ ಶೈಕ್ಷಣಿಕ ಸಾಲಿನಿಂದ ಆಯುಷ್ ಪದವಿ ಕೋರ್ಸ್‌ಗಳಿಗೆ NEET ಪರೀಕ್ಷೆಯನ್ನು ಕಡ್ಡಾಯಗೊಳಿಸಲಾಗಿರುತ್ತದೆ, ಆದ್ದರಿಂದ ವಿದ್ಯಾರ್ಥಿಗಳ ಆಯ್ಕೆ ಪ್ರಕ್ರಿಯೆಯನ್ನು ನಿಯಮಾನುಸಾರ NEET ರ್‍ಯಾಂಕ್ ಜೇಷ್ಠತೆಯ ಆಧಾರದ ಮೇಲೆ ಅವಕಾಶ ಕಲ್ಪಿಸಲಾಗುವುದು.

ಪಾರಂಪರಿಕ ವೈದ್ಯರ ಮಕ್ಕಳು 2018-19ನೇ ಶೈಕ್ಷಣಿಕ ಸಾಲಿನಲ್ಲಿ NEET ಪರೀಕ್ಷೆಯಲ್ಲಿ ಭಾಗವಹಿಸಿ ಅರ್ಹತೆ ಪಡೆದ ವಿದ್ಯಾರ್ಥಿಗಳು ಮಾತ್ರ ಅರ್ಜಿಗಳನ್ನು ಈ ಪ್ರಕಟಣೆಯ ದಿನಾಂಕದ 20 ದಿನಗಳ ಒಳಗಾಗಿ ಆಯುಷ್ ನಿರ್ದೇಶನಾಲಯ, ಧನ್ವಂತರಿ ರಸ್ತೆ, ಬೆಂಗಳೂರು ಇಲ್ಲಿಗೆ ಸಲ್ಲಿಸಲು ಸೂಚಿಸಿದೆ.

ಹೆಚ್ಚಿನ ವಿವರಗಳಿಗಾಗಿ ಆಯಾ ಜಿಲ್ಲೆಗಳ ಜಿಲ್ಲಾ ಆಯುಷ್ ಅಧಿಕಾರಿಗಳನ್ನು ಸಂಪರ್ಕಿಸುವುದು.

ನಿರ್ದೇಶಕರು
ಆಯುಷ್ ನಿರ್ದೇಶನಾಲಯ
ಧನ್ವಂತರಿ ರಸ್ತೆ, ಬೆಂಗಳೂರು-09

Scanned by CamScanner